Water reserve in the Rangadhamanakere near Chikballapur.

Q.—155. Sri A. MUNIAPPA (Sidlaghatta - Chikballapur — Scheduled Castes) .—

Will the Government be pleased to state :—

(*a*) whether it has come to their notice that the raiyats in Chikballapur and the neighbouring places are undergoing hardships due to scarcity of water supply in the wells even though wells have been dug at an expense of four to five thousand rupees in the area ;

(*b*) whether it has come to their notice that in case there is water in Rangadhamanakere to the west of Chickballapur then there will be an abundant supply of water in the above wells also ;

(*c*) whether they intend to grant contribution to the atchkatdars of the above tank and reserve water in the above tank ;

(*d*) whether they are aware that if it is done the raiyats who have spent lakhs of rupees and dug wells will be benefited ?

A.—Sri KADIDAL MANJAPPA (Minister for Revenue and Public Works) .—

(*a*) No.

(*b*) No.

(*c*) There is no question of contribution. If the reference is to remission, even that does not arise as it is not considered necessary to reserve the water in the tank denying it for irrigation purposes.

(*d*) The question does not arise in view of answer to (*c*) above.

ಶ್ರೀ ಎ. ಮುನಿಯಪ್ಪ.—ಈ ಪ್ರಶ್ನೆಯ (ಎ) ಭಾಗಕ್ಕೆ ಇಲ್ಲವೆಂದು ಉತ್ತರ ಹೇಳಿದೆ, 15-5-53ರಲ್ಲಿ ಚಿಕ್ಕಬಳ್ಳಾಪುರದ ರೈತರು ಸೇರಿ ಡೆಪ್ಯುಟೇಷನ್ ರಲ್ಲಿ ಹೋಗಿ ರಂಗಧಾಮನ ಕೆರೆಯಲ್ಲಿ ನೀರನ್ನು ರಿಜರ್ವ್ ಮಾಡಿದರೆ ನಮ್ಮ ತಾಲೂಕಿಗೆ ಅನುಕೂಲ ವಾಗುತ್ತದೆಂದು ಹೇಳಿದಮೇಲೆ ಸಂಬಂಧಪಟ್ಟ ಅಧಿಕಾರಿಗಳ ಸಲಹೆ ಕೇಳಿ ಅವರು ಕಾರ್ಯಗತಮಾಡುತ್ತೇವೆಂದು ಹೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

*ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಎ. ಮುನಿಯಪ್ಪ.—ರಾಮಮೂರ್ತಿ ಸಮಿತಿಯವರು ಅಲ್ಲಿಗೆ ಬಂದಾಗ ಏನೂ ಹೇಳಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಏನು ಹೇಳಿದರೋ ಗೊತ್ತಿಲ್ಲ.

ಶ್ರೀ ಎ. ಮುನಿಯಪ್ಪ.—ಅದರ ಕೆಳಗೆ ಸುಮಾರು 20 ಎಕರೆ ಮೇಲೆ ಜಮೀನಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—257 ಎಕರೆ ಇದೆಯೆಂದು ಸರ್ಕಾರಕ್ಕೆ ಗೊತ್ತಿದೆ.

ಶ್ರೀ ಎ. ಮುನಿಯಪ್ಪ.—ಅಲ್ಲಿ ನೀರು ದಾಸ್ತಾನು ಮಾಡಿದರೆ ಸುಮಾರು 20 ಸಾವಿರ ಪ್ರಜಾಸಂಖ್ಯೆಗೆ ನಳ್ಳಿಗಳ ಮೂಲಕ ನೀರು ಸರಬರಾಯಿ ಮಾಡಲು ಅನುಕೂಲವಾಗುತ್ತದೆಂಬುದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಕೆರೆ ಇರುವುದು ರೈತರ ಅನುಕೂಲಕ್ಕಾಗಿ, ವ್ಯವಸಾಯಕ್ಕಾಗಿ, ಕುಡಿಯುವ ನೀರಿಗೆ ಅನುಕೂಲ ಮಾಡುವ ವಿಷಯವನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಎ. ಮುನಿಯಪ್ಪ.—ರೈತರು ನಾವೇ ಕೊಡುತ್ತೇವೆಂದು ಭರವಸೆ ಕೊಟ್ಟರೆ ಅದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಪ್ರಶ್ನೆ ಸರಿಯಾಗಿ ಅರ್ಥವಾಗಲಿಲ್ಲ.

ಶ್ರೀ ಎ. ಮುನಿಯಪ್ಪ.—ರೈತರು ಮುಂದೆ ಬಂದು ಕಾಂಟ್ರಿಬ್ಯೂಷನ್ ನಾವೇ ಕೊಡುತ್ತೇವೆಂದು ಸರ್ಕಾರಕ್ಕೆ ಮನವಿ ಮಾಡಿದರೆ ಪರಿಶೀಲನೆ ಮಾಡುತ್ತೀರಾ ?

Sri KADIDAL MANJAPPA.—Even that is not clear, Sir.

ಶ್ರೀ ಎ. ಮುನಿಯಪ್ಪ.—ಅಚ್ಚುಕಟ್ಟುದಾರರಿಗೆ ಕಾಂಟ್ರಿಬ್ಯೂಷನ್ ಕೊಟ್ಟರೂ ಆ ಕೆರೆಯಲ್ಲಿ ನೀರನ್ನು ದಾಸ್ತಾನು ಮಾಡಲು ಸಾಧ್ಯವಿಲ್ಲವೆಂದು ಸರ್ಕಾರದವರು ತಿಳಿಸಿದ್ದಾರೆ. ಕಾಂಟ್ರಿಬ್ಯೂಷನ್ ಕೊಡುವ ಸ್ಥಿತಿಯಲ್ಲಿದ್ದರೆ, ಮಾಡಲು ಸಿದ್ಧವಾಗಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ರೈತರು ಯಾರಿಗೆ ಕಾಂಟ್ರಿಬ್ಯೂಷನ್ ಕೊಡುವುದೋ ಅರ್ಥವಾಗಲಿಲ್ಲ.

ಶ್ರೀ ಎ. ಮುನಿಯಪ್ಪ.—ಅಚ್ಚುಕಟ್ಟುದಾರರಿಗೆ ಇತರ ರೈತರು.

ಶ್ರೀ ಕಡಿದಾಳ್ ಮಂಜಪ್ಪ.—ಇದನ್ನು ಯೋಚನೆ ಮಾಡುತ್ತೇವೆ.

Repairing the loop road from Gundlupet to Terakanambi

Q.—162. Sri SIDDIAH *alias* KUNNIAH (Gundlupet — Heggaddevankote—Scheduled Castes) .—

Will the Government be pleased to state :—

(*a*) whether the work of the loop road from Gundlupet to Terakanambi has been completed ;

(*b*) the amount spent for the above work ;

(*c*) the steps they have taken in the matter of annual maintenance of the road ;